ಧೂಳಿರಲಿಲ್ಲ. ಗಾಜಿನ ಸಾಮಾನುಗಳು ಫಳ ಫಳ ಹೊಳೆಯುತ್ತಿದ್ದವು. ಅಡುಗೆ ಮನೆಯು ಶುಭ್ರವಾಗಿತ್ತು. ಹಾಗೆಯೇ ಪುಟ್ಟ ಮೇಜನ್ನು ತೋರಿಸಿ 'ಮನೆ ಚೊಕ್ಕ ಮಾಡುವಾಗ ಸಣ್ಣ ಪುಟ್ಟ ಸಾಮಾನುಗಳೇನು ಸಿಗಲಿಲ್ಲವೇ?' ಎಂದರು. ಲಿಲ್ಲಿ ಇಲ್ಲವೆಂದಳು. 'ಸರಿ' ಎಂದು ಹೇಳಿ ಆ ದಿನದ ಸಂಬಳವನ್ನು ಕೊಟ್ಟು 'ನಾಳೆ ನಿನ್ನ ಗೆಳತಿ ರೂಬಿಯನ್ನು ಕಳುಹಿಸು' ಎಂದು ಹೇಳಿದರು.

ಮಾರನೆಯ ದಿನ ರೂಬಿ ಬಂದಳು. ಅವಳಿಗೂ ಸಹ ಬೆಳಗಿನ ಉಪಾಹಾರ ಕೊಟ್ಟು ಮಾಡುವ ಕೆಲಸಗಳನ್ನು ವಿಸ್ತಾರವಾಗಿ ಹೇಳಿ 'ಮನೆ ಸ್ವಚ್ಛ ಮಾಡುವಾಗ ಸಿಗುವ ಸಣ್ಣಪುಟ್ಟ ಸಾಮಾನನ್ನು ಈ ಪುಟ್ಟ ಮೇಜಿನ ಮೇಲಿಡು' ಎಂದು ಹೇಳುವುದನ್ನು ಮರೆಯಲಿಲ್ಲ. ಮಾರ್ಗರೆಟ್ ತನ್ನ ಗೆಳತಿಯ ಮಗಳ ಮದುವೆಗೆ ಅಲಂಕರಿಸಿಕೊಂಡು ಕುದುರೆ ಸಾರೋಟಿನಲ್ಲಿ ಹೊರಟು ಹೋದರು.

ರೂಬಿಯು ಕೆಲಸವನ್ನೆಲ್ಲಾ ಅಚ್ಚುಕಟ್ಟಾಗಿ ಮಾಡಿದಳು. ಸಾಮಾನುಗಳನ್ನು ಎತ್ತಿ ಸ್ವಚ್ಛಗೊಳಿಸುವಾಗ ಏನಾದರೊಂದು ಪುಟ್ಟ ವಸ್ತು ಸಿಗುತ್ತಲೇ ಇತ್ತು. ಫೋಟೋ ಒರೆಸುವಾಗ ಒಂದು ಬೆಳ್ಳಿ ನಾಣ್ಯ, ವಿಗ್ರಹದಡಿ ಒಂದು ಪುಟ್ಟ ಪದಕ, ಹೂದಾನಿಯ ಕೆಳಗೆ ಒಂದು ಉಂಗುರ, ದಿಂಬಿನ ಸಂದಿಯಲ್ಲಿ ಬಳೆ, ಅಡುಗೆ ಮನೆಯಲ್ಲಿ ಪಾತ್ರೆಗಳ ಕೆಳ ಭಾಗದಲ್ಲಿ ಒಂದು ಸರ ಹೀಗೆ ಸಣ್ಣ ಪುಟ್ಟ ಸಾಮಾನುಗಳು ಸಿಕ್ಕಿದವು. ಯಜಮಾನಿ ಹೇಳಿದಂತೆ ಎಲ್ಲವನ್ನೂ ಎತ್ತಿ ಜೋಪಾನವಾಗಿ ಪುಟ್ಟ ಮೇಜಿನ ಮೇಲಿಟ್ಟಳು. ತಾನೂ ಊಟ ಮಾಡಿ ತೊಳೆದು ಅಡುಗೆ ಮನೆಯನ್ನು ಶುಚಿಗೊಳಿಸಿದಳು.

ನಂತರ ಯಜಮಾನಿಯನ್ನು ಕಾಯುತ್ತಾ ಮನೆಯ ಮುಂದಿನ ಹೂತೋಟದಲ್ಲಿ ತಿರುಗಾಡತೊಡಗಿದಳು. ಸುವಾಸನೆಯ ಮಲ್ಲಿಗೆ ಹೂಗಳು ಅರಳಿ ನಿಂತಿದ್ದವು. ಅದನ್ನೆಲ್ಲಾ ಕುಯ್ದುಕೊಂಡು ಬಂದಳು. ಬಣ್ಣ ಬಣ್ಣದ ಗುಲಾಬಿಯನ್ನೂ ತಂದು ಹಳೆಯ ಹೂಗಳನ್ನು ಚೆಲ್ಲಿ ನೀರು ತುಂಬಿ ಹೂದಾನಿಗಳಿಗೆ ಅಂದವಾಗಿ ಹೂ ಜೋಡಿಸಿದಳು. ಮಲ್ಲಿಗೆ ಹೂವಿನ ಮಾಲೆಯನ್ನು ಮಾಡಿ ಯೇಸುಕ್ರಿಸ್ತನ ಪ್ರತಿಮೆಗೆ ಹಾಕಿದಳು. ಅಷ್ಟು ಹೊತ್ತಿಗೆ ಸರಿಯಾಗಿ ಮಾರ್ಗರೆಟ್ ಬಂದರು. ಅವಳ ಕೈಯಲ್ಲಿದ್ದ ಚೀಲವನ್ನು ತೆಗೆದುಕೊಂಡು ಬಂದು ಒಳಗಿಟ್ಟು ಕುಡಿಯಲು ಹಣ್ಣಿನ ರಸವನ್ನು ತಂದು ಕೊಟ್ಟಳು.

ಮಾರ್ಗರೆಟ್ ಮನೆಯನ್ನು ಒಂದು ಸುತ್ತು ಬಂದು ಗಮನಿಸಿದರು. ಎಲ್ಲವೂ ಅಚ್ಚುಕಟ್ಟಾಗಿ ಹೊಳೆಯುತ್ತಾ ಅವುಗಳ ಸ್ಥಾನದಲ್ಲಿ ಶಿಸ್ತಾಗಿ ಕುಳಿತಿದ್ದವು. ನೋಡಿ ಸಂತೋಷವಾಯಿತು. ಪುಟ್ಟ ಮೇಜಿನ ಮೇಲೂ ಸಹ ಚಿಕ್ಕ ವಸ್ತುಗಳು ಕುಳಿತಿದ್ದವು. ಅದನ್ನು ನೋಡಿ ಯಜಮಾನಿಗೆ ಇನ್ನೂ ಸಂತೋಷವಾಯಿತು. ರೂಬಿಗೆ ಸಂಬಳ ಕೊಡದೆ ಅನಾಥಾಶ್ರಮದ ಮೇಲ್ವಿಚಾರಕರಾದ ಫಾದರ್ ಡಿಸೋಜಾರವರನ್ನು ನಾಳೆ ಬೆಳಗ್ಗೆ ಜೊತೆಯಲ್ಲಿ ಕರೆದುಕೊಂಡು ಬಾ ಎಂದು ಹೇಳಿ ಕಳುಹಿಸಿದರು.

ಮಾರನೆಯ ದಿನ ಫಾದರ್‌ರವರು ರೂಬಿಯನ್ನು ಕರೆದುಕೊಂಡು ಬಂದರು. ಫಾದರ್‌ರವರು ಹುಡುಗಿಯರ ವಿಷಯ ಕೇಳಿದರು. ಅದಕ್ಕೆ ಮಾರ್ಗರೆಟ್‌ರವರು 'ನನಗೆ ರೂಬಿ ಒಪ್ಪಿಗೆಯಾಗಿದ್ದಾಳೆ. ಅವಳೇ ಇನ್ನು ಮುಂದೆ ಕೆಲಸಕ್ಕೆ ಬರಲಿ' ಎಂದರು. ಅದಕ್ಕೆ ಕಾರಣವನ್ನೂ ಹೇಳಿದರು.

'ರೋಸಿ ತುಂಬಾ ಸೋಮಾರಿ. ಸ್ವಚ್ಛತೆಯ ಬಗ್ಗೆ ಏನೂ ತಿಳಿದಿಲ್ಲ. ಇನ್ನು ಲಿಲ್ಲಿ ಬಗ್ಗೆ ಹೇಳುವುದಾದರೆ ತುಂಬಾ ಚೆನ್ನಾಗಿ ಚಟುವಟಿಕೆಯಿಂದ ಕೆಲಸ ಮಾಡುತ್ತಾಳೆ. ಆದರೆ ಕೈ ಶುದ್ಧವಿಲ್ಲ. ಸಿಕ್ಕಿದ್ದನ್ನು ಎಗರಿಸುವ ಸ್ವಭಾವದವಳು. ಆದ್ದರಿಂದ ಅವಳನ್ನೂ ನಾನು ಆರಿಸಿಕೊಳ್ಳಲಿಲ್ಲ. ಇನ್ನು ರೂಬಿಯ ವಿಷಯ ಹೇಳುವುದಾದರೆ ಸ್ವಚ್ಛತೆ ಬಗ್ಗೆ, ಪ್ರಾಮಾಣಿಕತೆಯ ಬಗ್ಗೆ ಸೈ. ಆದ್ದರಿಂದ ಅವಳು ನಮ್ಮ ಮನೆಯಲ್ಲಿರಲಿ' ಎಂದರು.

ಫಾದರ್‌ರವರು 'ನೀವು ಹುಡುಗಿಯರಲ್ಲಿ ಈ ಗುಣಗಳನ್ನು ಹೇಗೆ ಪತ್ತೆ ಹಚ್ಚಿದಿರಿ?' ಎಂದು ಕೇಳಿದ್ದಕ್ಕೆ ಮಾರ್ಗರೆಟ್ ನಗುತ್ತಾ 'ನೋಡಿ ಫಾದರ್ ನಾನು ಮನೆಯಲ್ಲಿ ಈ ಪುಟ್ಟ ಮೇಜನ್ನಿಟ್ಟಿದ್ದೇನೆ, ಮನೆಯಲ್ಲಿರುವ ವಿಗ್ರಹಗಳು, ಹೂದಾನಿ, ಫೋಟೋಗಳ ಸಂಧಿನಲ್ಲಿ ಒಂದೊಂದು ಒಡವೆಗಳನ್ನು ಇಟ್ಟಿರುತ್ತೇನೆ. ಅದನ್ನು ಎತ್ತಿ ಸ್ವಚ್ಛಗೊಳಿಸಬೇಕು. ಆಗ ಸಿಗುವ ಒಡವೆಗಳನ್ನು ಈ ಮೇಜಿನ ಮೇಲಿಡಲು ಹೇಳುತ್ತೇನೆ. ಇದು ಅವರು ಸ್ವಚ್ಛ ಮಾಡಿದುದರ ಗುರುತು' ಎಂದರು. 'ರೋಸಿ ಯಾವ ಸಾಮಾನನ್ನೂ ಎತ್ತಿ ಗುಡಿಸಿರಲೇ ಇಲ್ಲ. ಆದ್ದರಿಂದ ಅವಳು ಸೋಮಾರಿಯೆಂದು ನಿರ್ಧರಿಸಿದೆ. ಲಿಲ್ಲಿ ಅಚ್ಚುಕಟ್ಟಾಗಿ ಕೆಲಸ ಮಾಡುತ್ತಾಳೆ. ಆದರೆ ಸಿಕ್ಕಿದ ಒಡವೆಗಳನ್ನು ಕಳ್ಳತನ ಮಾಡುವ ಸ್ವಭಾವದವಳು. ಆದರೆ ರೂಬಿ ಪ್ರಾಮಾಣಿಕಳು ಮತ್ತು ಶ್ರಮ ಜೀವಿ. ಎಲ್ಲಾ ಒಡವೆಗಳನ್ನೂ ಪುಟ್ಟ ಮೇಜಿನ ಮೇಲೆ ಒಪ್ಪವಾಗಿ ಜೋಡಿಸಿಟ್ಟಿದ್ದಳು. ಅದಕ್ಕೇ ನಾನು ಅವಳನ್ನು ಆರಿಸಿಕೊಂಡಿದ್ದು. ಮತ್ತೊಂದು ವಿಚಾರ. ಏನೆಂದರೆ ಇನ್ನು ಮುಂದೆ ರೂಬಿಯು ನಮ್ಮ ಮನೆಯಲ್ಲಿಯೇ ಇರಲಿ. ಅವಳನ್ನು ಮುಂದೆ ಓದಿಸಿ ಉಪಾಧ್ಯಾಯಿನಿಯನ್ನಾಗಿಯೋ ನರ್ಸ್ ಆಗಿಯೋ ಮಾಡುವ ಜವಾಬ್ದಾರಿ ನನ್ನದು' ಎಂದು ಹೇಳಿದರು.

ಮಾರ್ಗರೆಟ್ ಮತ್ತು ರೂಬಿ ನಗು ನಗುತ್ತಾ ಫಾದರ್‌ರವರನ್ನು ಬೀಳ್ಕೊಟ್ಟರು. ಆದ್ದರಿಂದ ಮಕ್ಕಳಿರಾ, ಪ್ರಾಮಾಣಿಕತೆ, ಶ್ರಮ ಜೀವನದಿಂದ ಬಾಳನ್ನು ಹಸನು ಮಾಡಿಕೊಳ್ಳಬಹುದು.

**-ಶಾರದಾ ಶಾಮಣ್ಣ**

# ಒಗ್ಗಟ್ಟಿನ ಹನಿಗಳು



**ಪ**ಟ ಪಟ ಉದುರಿದ
ಮುಗಿಲಿನ ಹನಿಗಳು
ಒಬ್ಬರನೊಬ್ಬರು ನೋಡಿದವು
ಜಗಳವನಾಡದೆ
ತರಲೆಯ ಮಾಡದೆ
ಅಕ್ಕರೆಯಿಂದ ಸೇರಿದವು

ಬೆಟ್ಟದ ಹನಿಗಳು
ಗದ್ದೆಯ ಹನಿಗಳು
ಹಾದಿ–ಬೀದಿ ತೋಟದ
ಹನಿಗಳು
ಸರಸರ ಕಾಲುವೆ ಕೂಡಿದವು,
ನಾ ಮೇಲೆನ್ನದೆ
ನೀ ಕೀಳೆನ್ನದೆ
ಜಾರುತ ಜಿಗಿಯುತ
ಓಡಿದವು

ಊರು–ಕೇರಿಗಳ
ಕೊಳೆ ಕೆಸರನ್ನು
ಒಗ್ಗಟ್ಟಿನಲಿ ಒರೆಸಿದವು
ಹಾದಿಗೆ ತೊಡಕನು
ನೀಡುವ ಕೆಡುಕನು
ರೋಷದಿಂದ ಕೊಚ್ಚಿದವು

ಕಿರು ಹೊಳೆ ಮರಿ ಹೊಳೆ
ಕರಿ ಹೊಳೆ ಕೆಂಪ್ಹೊಳೆ
ಸೇರುತ ಒಟ್ಟಿಗೇ ಸಾಗಿದವು,
ನದಿಯಾಗುತ ಹರಿದವು
ಧುಮ್ಮಿಕ್ಕುತ ಜಲಪಾತವ
ಮಾಡಿದವು!

**-ಗಣೇಶ ಹೊಸ್ಮನೆ,**
**ಶಿರಸಿ**